**ದಿ:30.08.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ ಎ ಎನ್ ವಕೀಲರಿಂದ:**

ನಾನು ಈಗ ಗೋಣಿಕೊಪ್ಪದಲ್ಲಿ ನನ್ನ ಸ್ವಂತ ಮನೆಯಲ್ಲಿ ವಾಸವಿದ್ದೇನೆ. ಸದರಿ ಮನೆಯನ್ನು 2009 ರಲ್ಲಿ ಖರೀದಿ ಮಾಡಿದ್ದೇವೆ. ನನ್ನ ದೊಡ್ಡ ಮಗ 1 ನೇ ವಾದಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದಾನೆ, 2 ನೇ ವಾದಿ ಅಂತಿಮ ವರ್ಷದ ಬಿ ಕಾಂ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ಗೋಣಿಕೊಪ್ಪದಲ್ಲಿರುವ ಮನೆಯನ್ನು ಬಿಟ್ಟರೆ ನನಗೆ ಬೇರೆ ಆಸ್ತಿ ಇಲ್ಲ. 1 ನೇ ಪ್ರತಿವಾದಿ ನನ್ನ ಮಾವ, ಅವರ ತಾತನ ಹೆಸರು ನಂಜಪ್ಪ ಎಂದು ನನಗೆ ಗೊತ್ತಿಲ್ಲ. ಸದರಿ ನಂಜಪ್ಪನವರಿಗೆ ಮೂರು ಜನ ಮಕ್ಕಳು ಅಂದರೆ ಬೆಳ್ಳಿಯಪ್ಪ, ಮಾದಪ್ಪ ಮತ್ತು ಮುತ್ತಪ್ಪ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವನ ತಂದೆ ಬೆಳ್ಳಿಯಪ್ಪನವರಿಗೆ ಒಟ್ಟು 5 ಜನ ಮಕ್ಕಳು, ಅವರ ಪೈಕಿ 3 ಜನ ಗಂಡು, 2 ಹೆಣ್ಣು ಮಕ್ಕಳು ಎಂದರೆ ಸರಿ. ಸದರಿ ಬೆಳ್ಳಿಯಪ್ಪನ ಮೂರು ಗಂಡು ಮಕ್ಕಳ ಹೆಸರು ಬೋಜಪ್ಪ, ಅಯ್ಯಣ್ಣ ಅಂದರೆ 1 ನೇ ಪ್ರತಿವಾದಿ ಮತ್ತು ಪೊನ್ನಪ್ಪ. ಹೆಣ್ಣು ಮಕ್ಕಳ ಹೆಸರು ಮಾಚಮ್ಮ ಮತ್ತು ಅಮ್ಮವ್ವ. ಬೋಜಪ್ಪರವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ, ಅವರ ಹೆಸರು ರಾಧಾವೇಣಿ ಮತ್ತು ಪ್ರೇಮಾವತಿ. ಬೋಜಪ್ಪನ ಗಂಡು ಮಕ್ಕಳನ್ನು ಈ ಕೇಸಿನಲ್ಲಿ ಪಕ್ಷಕಾರರಾಗಿ ಮಾಡಿದ್ದೇನೆ, ಆದರೆ ಹೆಣ್ಣು ಮಕ್ಕಳನ್ನು ಪಕ್ಷಕಾರರಾಗಿ ಮಾಡಿಲ್ಲ.

ಸದರಿ ಪೊನ್ನಪ್ಪ ತೀರಿ ಹೋಗಿದ್ದಾರೆ. ಅವರಿಗೆ ಇಬ್ಬರು ಹೆಣ್ಣು ಮಕ್ಕಳು, ಅವರ ಹೆಸರು ಸರೋಜಿನಿ ಮತ್ತು ರತ್ನಾವತಿ, ಅವರನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ಸದರಿ ಬೆಳ್ಳಿಯಪ್ಪನ ಮಗಳು ಮಾಚಮ್ಮ ಈಗ ಜೀವಂತ ಇದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಮಾಚಮ್ಮ ತೀರಿ ಹೋಗಿದ್ದು ಅವರಿಗೆ 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ಬೆಳ್ಳಿಯಪ್ಪನ ಇನ್ನೊಬ್ಬ ಮಗಳು ಅಮ್ಮವ್ವ ಜೀವಂತ ಇದ್ದಾರೆ, ಅವರನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ನಮ್ಮ ಮಾವನ ತಂದೆ ಬೆಳ್ಳಿಯಪ್ಪರವರ ಅಣ್ಣ ತಮ್ಮಂದಿರ ನಡುವೆ ಆಸ್ತಿಪಾಲು ಆಗಿತ್ತೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಸದರಿ ಬೆಳ್ಳಿಯಪ್ಪ ಮತ್ತು ಅವರ ಅಣ್ಣ-ತಮ್ಮಂದಿರ ನಡುವೆ ಪಾಲಾಗಿದೆಯೊ ಇಲ್ಲವೊ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ.ಇದೆ.

ಸಹಿ/-

(ರೂಪ ಕೆ)

ಹಿರಿಯ ಸಿವಿಲ್ ನ್ಯಾಯಾಧೀಶರು,

ಕೊಡಗು, ಮಡಿಕೇರಿ.